ರಾಜ್ಯದಲ್ಲಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕೊಳವೆ ಬಾವಿ ದುರಸ್ತಿ ಬಗ್ಗೆ

೪೦೫. ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಜಕ್ಕ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಂಡಲ ಪಂಚಾಯಿತಿ ಅಸ್ತಿತ್ವಕ್ಕೆ ಬಂದ ಮೇಲೆ ಅದರ ವ್ಯಾಪ್ತಿಯಲ್ಲಿ ಬರುವ ಕೊಳವೆ ಬಾವಿಗಳನ್ನು ದುರಸ್ತಿ ಮಾಡುವ ಹೊಣೆಗಾರಿಕೆಯನ್ನು ಯಾರಿಗೆ ಪಹಿಸಲಾಗಿದೆ ?

ಆ) ಇದಕ್ಕೆ ತಗಲುವ ವೆಚ್ಚವನ್ನು ನಿರ್ವಹಿಸುವವರು ಯಾರು ?

ಇ) ೧೯೮೫-೮೬ರಲ್ಲಿ ರಾಜ್ಯದಲ್ಲಿ ಎಷ್ಟು ಕೊಳವೆ ಬಾವಿಗಳಿದ್ದವು ಆ ವರ್ಷ ದುರಸ್ತಿಗಾಗಿ ಎಷ್ಟು ವೆಚ್ಚ ಮಾಡಲಾಗಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಮಂಡಲ ಪಂಚಾಯಿತಿಗೆ ವಹಿಸಲಾಗಿದೆ.

ಆ) ಮಂಡಲ ಪಂಚಾಯತ್.

ಇ) ೧) ಕೊಳವೆ ಬಾವಿಗಳು ೯೪೧೦
೨) ಖರ್ಚು ೧೮೪.೫೯ ಲಕ್ಷಗಳು

ರಾಜ್ಯದಲ್ಲಿ ಹುಡ್ಕೋ ನೆರವಿನ ಜನತಾ ಮನೆಗಳು

೫೨೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ ನೇ ವರ್ಷಗಳಲ್ಲಿ ಕಡಿಮೆ ದರದ ಜನತಾ ಮನೆಗಳಿಗೆ ಬೇಡಿಕೆ ಎಷ್ಟು ?

ಆ) ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ ವರ್ಷಗಳಲ್ಲಿ ಮಂಜೂರಾದ ಕಡಿಮೆ ದರದ ಜನತಾ ಮನೆಗಳು ಎಷ್ಟು ? (ಸಾಲುವಾರು ಮಾಹಿತಿಯನ್ನು ಒದಗಿಸಬೇಕು)

ಇ) ಪೂರ್ಣಗೊಳಿಸಿದ ಒಟ್ಟು ಮನೆಗಳ ಸಂಖ್ಯೆ ಎಷ್ಟು ?

ಈ) ಇಂದಿರಾ ಆವಾಜ್ ಯೋಜನೆಯಲ್ಲಿ ಮಂಜೂರಾದ ಒಟ್ಟು ಮನೆಗಳ ಸಂಖ್ಯೆ ಎಷ್ಟು ?

ಉ) ಇಂದಿರಾ ಆವಾಜ್ ಯೋಜನೆಯನ್ನು ಎಲ್ಲಾ ಹಳ್ಳಿಗಳಿಗೆ ವಿಸ್ತರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಈ ವಿಷಯದಲ್ಲಿ ವಾರ್ಷಿಕ ಸಮೀಕ್ಷೆ ನಡೆಸಿರುವುದಿಲ್ಲ.

ಆ) ೧೯೮೫-೮೬ ೫೫,೨೨೫
೧೯೮೬-೮೭ ೫೦,೦೦೦
೧೯೮೭-೮೮ ೪೦,೫೦೫

ಇ) ೫೨,೭೪೯

ಈ) ೧೫,೭೯೮

ಉ) ಕೇಂದ್ರ ಸರ್ಕಾರದವರು ಕೊಡುವ ಅನುದಾನಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಬಿಡುಗಡೆಯಾದ ಜೀತ ಪದ್ಧತಿಯು ನೌಕರರು ವಾಸ ಮಾಡುವ ಎಲ್ಲಾ ಹಳ್ಳಿಗಳಿಗೆ ಈ ಯೋಜನೆಯನ್ನು ಹಂತ ಹಂತವಾಗಿ ವಿಸ್ತರಿಸಲಾಗುವುದು.